Regd. No. 4277 RBI Lic No. UBD/1464P ☎:08373 266627
Mail id. bubrrnr@gmail.com


# ಶ್ರೀ ಬಸವೇಶ್ವರ ಅರ್ಬನ್ ಕೋ-ಆಪ್ ಬ್ಯಾಂಕ ಲಿ.,

ಎ.ಪಿ.ಎಮ್.ಸಿ. ರಸ್ತೆ, ರಾಣೇಬೆನ್ನೂರ-581115.
ಜಿಲ್ಲಾ: ಹಾವೇರಿ. ಕರ್ನಾಟಕ: ರಾಜ್ಯ

## 101 ನೇ ವಾರ್ಷಿಕ ಸರ್ವಸಾಧಾರಣ ಸಭೆಯ ನೋಟೀಸು

ನಮ್ಮ ಬ್ಯಾಂಕಿನ ಸನ್ **2024-25** ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು **ದಿನಾಂಕ: 14/09/2025 ನೇ ಭಾನುವಾರ ಬೆಳಿಗ್ಗೆ 11-00 ಘಂಟೆಗೆ ಬ್ಯಾಂಕಿನ "ವಜ್ರ ಮಹೋತ್ಸವ" ಸಭಾಭವನದಲ್ಲಿ** ಈ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸುವುದರ ಸಲುವಾಗಿ ನಮ್ಮ ಬ್ಯಾಂಕಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಕರೆಯಲಾಗಿದೆ ಮಾನ್ಯ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಯು

### -: ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :-



**ಪ್ರಾರ್ಥನೆ, ಸ್ವಾಗತ**

1. ಹಿಂದಿನ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದುವುದು ಮತ್ತು ಧೃಡೀಕರಿಸುವುದು
2. ನಿರ್ದೇಶಕ ಮಂಡಳಿಯವರು ಹಾಜರುಪಡಿಸುವ ಬ್ಯಾಂಕಿನ 2024-25 ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು. ಮತ್ತು ಸದರ ಸಾಲಿನ ಅಢಾವೆ ಹಾಗೂ ಲಾಭ-ಹಾನಿ ಪತ್ರಿಕೆಯನ್ನು ಮಂಜೂರು ಮಾಡುವುದು.
3. ಸನ್ 2024-25ರ ಲೆಕ್ಕ ಪರಿಶೋಧಕರ ವರದಿ ಪರಿಶೀಲಿಸುವುದು ಮತ್ತು ಆಡಳಿತ ಮಂಡಳಿಯ ಅನುಪಾಲನಾ ವರದಿಯನ್ನು ಧೃಢೀಕರಿಸುವುದು.
4. ಸನ್ 2025-26ನೇ ಸಾಲಿನ ಮುಂಗಡ ಪತ್ರ (ಬಜೆಟ್) ವನ್ನು ಮಂಜೂರು ಮಾಡುವುದು ಮತ್ತು ಸನ್ 2024-25 ನೇ ಸಾಲಿಗೆ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ವೆಚ್ಚಗಳಿಗೆ ಮಂಜೂರಾತಿಕೊಡುವುದು.
5. ನಿಯಮಾನುಸಾರ ಲಾಭದ ವಿನಿಯೋಗ ಮತ್ತು ಲಾಭಾಂಶ ಪ್ರಮಾಣದ ಅನುಮೋದನೆ.
6. ಸನ್ 2025-26 ನೇ ಸಾಲಿಗೆ ಭಾರತೀಯ ರಿಜರ್ವ ಬ್ಯಾಂಕಿನ ನಿರ್ದೇಶನದ ಮೇರೆಗೆ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆ ಕುರಿತು.
7. ನಿರ್ದೇಶಕ ಮಂಡಳಿಯು ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
8. ಬ್ಯಾಂಕಿನ ಸಿಬ್ಬಂದಿ ವೃಂದ ಬಲ ಮತ್ತು ನೌಕರರಿಗೆ ಕೊಡಲಾಗುವ ವೇತನ ಶ್ರೇಣಿ ಅನುಮೋದನೆ.
9. ನಿಷ್ಕ್ರಿಯೆ ಸಾಲಗಳ ಅಡಿಯಲ್ಲಿ ಬಂದಿರುವ ಸಾಲಗಾರರ ಪ್ರಕರಣಗಳ ಬಗ್ಗೆ ಚರ್ಚಿಸುವ ಕುರಿತು.
10. ಬ್ಯಾಂಕಿನ ನೂತನ ಶಾಖೆಗಳನ್ನು ತೆರೆಯುವ ಕುರಿತು.
11. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೇ ವಿಷಯಗಳು

ವಂದನಾರ್ಪಣೆ

| | | | |
|---|---|---|---|
| ರಾಣೇಬೆನ್ನೂರ | **ಶ್ರೀ ಪರಮೇಶ್ವರಪ್ಪ. ಎಮ್. ಗವಳಿ** | **ಶ್ರೀ ಮಂಜುನಾಥ.ಹೆಚ್.ಓಲೇಕಾರ** | **ಶ್ರೀ ನಿರಂಜನ.ಎಮ್.ಉದಾಸಿ** |
| ದಿನಾಂಕ: 24/07/2025 | ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕರು |

### -: ನಿರ್ದೇಶಕರು :-

| | | |
|---|---|---|
| 1. ಶ್ರೀ ಚನವೀರಪ್ಪ ಆರ್. ಅಸುಂಡಿ | 2. ಶ್ರೀ ಶಿವಕುಮಾರ ಜಿ. ನರಸಗೊಂಡರ | 3. ಶ್ರೀ ಶಂಭುಲಿಂಗಪ್ಪ. ಜಿ.ಕಟಗಿಹಳ್ಳಿ |
| 4. ಶ್ರೀ ರಾಜೇಂದ್ರಕುಮಾರ ಪಿ. ತಿಳವಳ್ಳಿ | 5. ಶ್ರೀ ವಿರೇಶ ಎಂ. ಜಂಬಗಿ | 6. ಶ್ರೀ ಪರಮೇಶಪ್ಪ ಬಿ. ಯಡಿಯಾಪುರ |
| 7. ಶ್ರೀ ವಿಷ್ಣು ಎನ್. ಜಿಂಗಾಡೆ | 8. ಶ್ರೀ ಈಶ್ವರಪ್ಪ ಜಿ. ಹಾವನೂರ | 9. ಶ್ರೀಮತಿ ಶೋಭಾ ಜಿ. ದೇವಗಿರಿಮಠ |
| 10. ಶ್ರೀಮತಿ ಲತಾ ಎಂ. ಬೇತೂರು | 11. ಶ್ರೀ ರಮೇಶ. ಎಮ್. ಪಟ್ಟಣಶೆಟ್ಟಿ (ವೃತ್ತಿಪರ ನಿರ್ದೇಶಕರು) | |
| 12. ಶ್ರೀ ಶೇಖರಯ್ಯ ಮಠದ (ವೃತ್ತಿಪರ ನಿರ್ದೇಶಕರು) | | |

## –: ಸದಸ್ಯರು ಗಮನಿಸಬೇಕಾದ ಸೂಚನೆಗಳು :–

1. ನೂತನಕ.ಸ.ಸಂ ಕಾಯ್ದೆ ಕಲಂ ಪ್ರಕಾರ ಉಪನಿಯಮಗಳಲ್ಲಿ ತಿದ್ದುಪಡಿತರಲಾಗಿದೆ. ಅದರ ಪ್ರಕಾರ ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ 5 ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ 2 ವಾರ್ಷಿಕ ಮಹಾಸಭೆಗೆ ಹಾಜರಾಗಿದ್ದಲ್ಲಿ ಅಥವಾ ಹಿಂದಿನ 5 ಸಹಕಾರ ವರ್ಷಗಳ ಪೈಕಿ ಯಾವುದೇ 2 ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕುದೊರಕಿಸಿಕೊಡುವಕನಿಷ್ಠಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
2. ಬ್ಯಾಂಕಿನ ಯಾವುದೇ ರೀತಿಯ ಖಾತೆ ತೆರೆದು ಕಡ್ಡಾಯವಾಗಿ ವರ್ಷಗಳಲ್ಲಿ ಕನಿಷ್ಟ 2 ವರ್ಷಗಳಲ್ಲಿ ಬ್ಯಾಂಕಿನ ವ್ಯವಹಾರವನ್ನು ಮಾಡತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಸದಸ್ಯತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ಕಾರಣ ಸದಸ್ಯರು ಕೂಡಲೇ ಕಾರ್ಯತತ್ಪರರಾಗಲು ಆಡಳಿತ ಮಂಡಳಿಯ ಪರವಾಗಿ ವಿನಂತಿಸಿ ಕೊಳ್ಳುತ್ತೇವೆ.

## –: ವಿಶೇಷ ಸೂಚನೆ :–

**1.ಬ್ಯಾಂಕಿನ ಸದಸ್ಯರು ಸರ್ವಸಾಧರಣಾ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು ಇಚ್ಚಿಸಿದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಸಭೆಯ ದಿನಾಂಕದಿಂದ 7 ದಿವಸ ಮುಂಚಿತ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು, ಪ್ರಶ್ನೆಗಳು ಬ್ಯಾಂಕಿನ ಆರ್ಥಿಕ ತ:ಖ್ತೆಗಳಿಗೆ ಸಂಬಂಧಿಸಿದ್ದು ಮಾತ್ರ ಇರತಕ್ಕದ್ದು. (ಆರ್ಥಿಕ ತ:ಖ್ತೆಗಳನ್ನು ಬ್ಯಾಂಕಿನ ನೋಟಿಸ್ ಬೋರ್ಡನಲ್ಲಿ ಪ್ರಕಟಿಸಿದೆ.)**

**2. ಬ್ಯಾಂಕಿನ ಶತಮಾನೋತ್ಸವದ ನೆನಪಿನ ಕಾಣಿಕೆಯನ್ನು ಪಡೆಯದೇ ಇರುವ ಸದಸ್ಯರು ತಮ್ಮ ಇತ್ತೀಚಿನ 3 ಕಲರ ಫೋಟೋದೊಂದಿಗೆ ಆಧಾರಕಾರ್ಡ, ಪಾನಕಾರ್ಡ ಜೆರಾಕ್ಸ್ ಪ್ರತಿಯನ್ನು ನೀಡಿ ಪಡೆದುಕೂಳ್ಳಲು ವಿನಂತಿಸಲಾಗಿದೆ.**

3. ಸಾಲಗಾರರಷ್ಟೇ ಹೊಣೆಗಾರಿಕೆಯು ಸಾಲಗಾರರ ಜಾಮೀನುದಾರರದ್ದು ಇರುತ್ತದೆ. ಕಾರಣ ಸರಿಯಾದ ಸಮಯದಲ್ಲಿ ಸಾಲಗಾರರು ಕಂತು/ಸಾಲ ಬಾಕಿ ಪಾವತಿಸುವಂತೆ ನೋಡಿಕೊಳ್ಳಬೇಕು.

4. ಭಾರತೀಯ ರಿಝರ್ವ ಬ್ಯಾಂಕ ನಿಯಮಾನುಸಾರ 90 ದಿನಗಳಿಂದ ಕಂತು ಬಾಕಿ ಇರುವ/ಬಡ್ಡಿ ಬಾಕಿ ಇರುವ/ ಚಲಾವಣೆ ಇಲ್ಲದೇ ಇರುವ ಸಾಲವು ನಿಷ್ಕ್ರೀಯ ಸಾಲದ ಅಡಿ (ಎನ್.ಪಿ.ಎ.) ನಿಷ್ಕ್ರೀಯ ಸಾಲವೆಂದು ಪರಿಗಣಿಸಲ್ಪಡುತ್ತದೆ. ನಿಯಮಾನುಸಾರ ಅಂಥ ಸಾಲಗಾರರು/ಜಾಮೀನುದಾರರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಂಥ ಸದಸ್ಯರಿಗೆ ವಾರ್ಷಿಕ ಸರ್ವಸಾಧಾರಣ ಸಭೆ ವಿಷಯದಲ್ಲಿ ಚರ್ಚಿಸುವ/ಮತದಾನದ/ಆಡಳಿತ ಮಂಡಳಿ ಚುನಾವಣೆಗೆ ಸ್ಪರ್ಧಿಸುವ/ಮತದಾನದ ಹಕ್ಕು ಇರುವುದಿಲ್ಲ.

5. ಭಾರತೀಯ ರಿಝರ್ವ ಬ್ಯಾಂಕ ನಿಯಮಾನುಸಾರ (ಕೆ.ವಾಯ್.ಸಿ.) ಪ್ರಕಾರ ತಮ್ಮ ಇತ್ತೀಚಿನ ಭಾವಚಿತ್ರ/ಓಟಿಂಗ್‌ಕಾರ್ಡ/ಆಧಾರಕಾರ್ಡ/ಪಾನ ಕಾರ್ಡ/ಕಡ್ಡಾಯವಾಗಿ ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆ ಸ್ಥಿರಗೊಳಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಖಾತೆ ಸ್ಥಗಿತಗೊಳಿಸಲಾಗುವುದು.

6. ತಮ್ಮ ವಿಳಾಸ ಬದಲಾಣೆಯಾದಲ್ಲಿ ತಮ್ಮೊಂದಿಗೆ ಪತ್ರ ವ್ಯವಹಾರ ಮಾಡಲು ಅನುಕೂಲವಾಗುವಂತೆ ತಮ್ಮಇತ್ತೀಚಿನ ವಿಳಾಸವನ್ನು ಬ್ಯಾಂಕಿಗೆ ನೀಡಿ ಅಪಡೇಟ್ ಮಾಡಿಸಿಕೊಳ್ಳತಕ್ಕದ್ದು.

7. ಡಿವಿಡೆಂಡ್ ಹಣಕ್ಕೆ ಕಡ್ಡಾಯವಾಗಿ ಉಳಿತಾಯ ಖಾತೆ ತೆರೆಯಿರಿ. 3 ವರ್ಷಗಳಿಂದ ಪಾವತಿಯಾಗದೇ ಇರುವ ಡಿವಿಡೆಂಡ್ ಹಣವನ್ನು ಕಡ್ಡಾಯವಾಗಿ ಉಪನಿಯಮಗಳ ಅನುಸಾರ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.

8. ಆದಾಯಕರ ಕಾನೂನು 1961ರ ನಿಯಮಗಳ ಮೇರೆಗೆ 192ರ ಮೇರೆಗೆ ನವ್ಹಂಬರ 1998 ರಿಂದ ಬ್ಯಾಂಕಿನಲ್ಲಿ ವ್ಯವಹರಿಸುವುದಕ್ಕೆ ಠೇವು ಮಾಡುವುದಕ್ಕೆ 15ಜಿ ಹಾಗೂ 15ಹೆಚ್ ಪಾರ್ಮನೊಂದಿಗೆ ಪ್ಯಾನ್ ಸಂಖ್ಯೆ ಹಾಗೂ ಆಧಾರ ಕಾರ್ಡ ಸಹ ಕಡ್ಡಾಯವಾಗಿರುತ್ತದೆ. ಕಾರಣ ಯಾವತ್ತು ಠೇವುದಾರರು ಇವೆರಡು ದಾಖಲೆಗಳನ್ನು ಸಲ್ಲಿಸಿ ಬ್ಯಾಂಕಿನೊಂದಿಗೆ ಸಹಕರಿಸಬೇಕಾಗಿ ವಿನಂತಿ.

9. ಆಕ್ಸಿಸ್ ಬ್ಯಾಂಕ ಸಹಭಾಗಿತ್ವದೊಂದಿಗೆ ಎನ್.ಇ.ಎಫ್.ಟಿ./ಆರ್.ಟಿ.ಜಿ.ಎಸ್. ನಿಯಮಾನುಸಾರ ಹಣ ವರ್ಗಾವಣೆ ವ್ಯವಸ್ಥೆ ಇರುತ್ತದೆ, ಸದಸ್ಯರು ಸದರ ಸೌಲಭ್ಯದ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

10. ಭಾರತೀಯ ರಿಝರ್ವ ಬ್ಯಾಂಕ ನಿಯಮಾನುಸಾರ ಕೋರ್ ಬ್ಯಾಂಕಿಂಗ್ ತತ್ರಾಂಶವನ್ನು ಅಳವಡಿಸಿಕೊಳ್ಳಲಾಗಿದೆ.

11. ಗ್ರಾಹಕರಿಗೆ ಎಟಿಎಮ್ ಸೌಲಭ್ಯ ಮತ್ತು ಐ.ಎಮ್.ಪಿ.ಎಸ್. ಸೌಲಭ್ಯ, ಮೊಬೈಲ್‌ಆಪ್, ಪೋನ್ ಪೇ, ಯು.ಪಿ.ಐ. ಸೇವೆಗಳನ್ನು ಒದಗಿಸಲಾಗಿದೆ.

12. ಬ್ಯಾಂಕಿನ ತ್ವರಿತ ಮಾಹಿತಿಗಾಗಿ ಎಸ್.ಎಮ್.ಎಸ್. ವ್ಯವಸ್ಥೆ ಇರುತ್ತದೆ. ಕಾರಣ ಸದಸ್ಯರು/ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆ ಬ್ಯಾಂಕಿಗೆ ಒದಗಿಸಬೇಕಾಗಿ ವಿನಂತಿ.

**"ಕ್ಷಿಪ್ರ ಸೇವೆಗಾಗಿ ಇಂದೇ ಸಂದರ್ಶಿಸಿರಿ" ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ**

ಇಂದ:– **ಶ್ರೀ ಬಸವೇಶ್ವರ ಅರ್ಬನ್ ಕೋ–ಆಪ್ ಬ್ಯಾಂಕ ಲಿ.,**

ಎ.ಪಿ.ಎಮ್.ಸಿ. ರಸ್ತೆ, ರಾಣೇಬೆನ್ನೂರ–581115, ಜಿ॥ ಹಾವೇರಿ.

ತೆರೆದ ಅಂಚೆ



ಶ್ರೀ ಸಿದ್ಧಾರೂಢ ಪ್ರಿಂಟರ್ಸ, ರಾಣೇಬೆನ್ನೂರು–9964467200